**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 21/22**

ಹೆಸರುಃ ಬಿ.ಎಸ್ ರೂಪ್ಲಿಬಾಯಿ ಸಿ.ಡಬ್ಲ್ಯೂಃ 12

ವಯಸ್ಸುಃ 48 ಪಿ.ಡಬ್ಲ್ಯೂಃ 10

ಗಂಡಃ ರಾಮನಾಯ್ಕ
ಉದ್ಯೋಗಃ ಪಿ.ಎಸ್.ಐ . ಮಾಯಕೊಂಡ ಪೋಲೀಸ್ ಠಾಣೆ

ವಾಸ ಸ್ಥಳಃ ಮಾಯಕೊಂಡ
ಸಾಕ್ಷಿಗೆ ದಿನಾಂಕಃ 02.12.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅರವರಿಂದ ಮುಖ್ಯ ವಿಚಾರಣೆ

2020 ಜನವರಿಯಿಂದ 2022 ಜುಲೈವರೆಗೆ ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ ಪೊಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30-08-2021 ರಂದು ಸಂಜೆ 7.15 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ, ಠಾಣೆ ಗುನ್ನೆ ಸಂಃ 311/2021 ರಲ್ಲಿ ನೊಂದಾಯಿಸಿ ಕೊಂಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ಜ್ನು ನಿ ಪಿ 1 ಬಿ ಎಂದು ಗುರುತಿಸಲಾಯಿತು .

ದಿಃ 31-08-2021 ರಂದು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಸದರಿ ದಾಖಲೆಯನ್ನು ಸಾಕ್ಷಿಯು ಗುರುತಿಸಿರುವುದರಿಂದ ನಿ ಪಿ 12 ಎಂದು ಗುರುತಿಸಲಾಯಿತು . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 12 ಎ ಎಂದು ಗುರುತಿಸಲಾಯಿತು .

ದಿಃ 31-08-2021 ರಂದು ಗೊಪ್ಪೇನಹಳ್ಳಿ ಗ್ರಾಮದ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಗೆಗ 10.00 ಗಂಟೆಯಿಂದ 11.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿರುತ್ತದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2 ಡಿ ಎಂದು ಗುರುತಿಸಲಾಯಿತು .

ಸದರಿ ಸಮಯದಲ್ಲಿ ಪೋಟೋವನ್ನು ತೆಗೆಸಿರುತ್ತೇನೆ . ಸದರಿ ಪೋಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ .

ದಿಃ 31-08-2021 ರಂದು ಪಂಚರಾದ ಚಾಸಾ 2 ಮತ್ತು 3 ರವರಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆ . ಸದರಿ ನೋಟಿಸನ್ನು ಸಾಕ್ಷಿಯು ಗುರುತಿಸಿದ್ದುದರಿಂದ ಅವುಗಳನ್ನು ನಿ ಪಿ 13 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 13 ಎ ಎಂದು

ಗುರುತಿಸಲಾಯಿತು . ನಂತರ ಚಾಸಾ 8 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ .

ದಿಃ 20-10-2021 ರಂದು ಚಾಸಾ 11 ರವರು ಮಾಲು , ಸ್ಥಳ ಮತ್ತು ಅಮಾನತ್ತು ಪಂಚನಾಮೆ ಹಾಗೂ ಆರೋಪಿ ತೋರಿಸಿದ ಸ್ಥಳ ಪಂಚನಾಮೆ , ಪಂಚನಾಮೆಗಳನ್ನು ಮಾಡುವಾಗ ತೆಗೆದ ಪೋಟೋಗಳು , ವರದಿ ಮತ್ತು ಆರೋಪಿಯ ಸ್ವಇಚ್ಛೆ ಹೇಳಿಕೆಯನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ . ಸದರಿ ದಾಖಲೆಗಳನ್ನು ಈಗಾಗಲೇ ನಿಶಾನೆಗೊಳಿಸಲಾಗಿದೆ . ನಂತರ ಮಾಲುಪಟ್ಟಿ ಸಂಖ್ಯೆಃ 150/2021 ರಲ್ಲಿ ನೊಂದಾಯಿಸಿಕೊಂಡಿರುತ್ತೇನೆ . ಚಾಸಾ 8 ಮತ್ತು 9 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ 6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ .

ಪ್ರಕರಣ ಸಂಖ್ಯೆಃ 348/2021 ರ ಮೂಲ ದಾಖಲಾತಿಗಳನ್ನು ಸಿಆರ್ ಸಂಃ 311/2021 ರಲ್ಲಿ ಅಳವಡಿಸಿಕೊಂಡಿರುತ್ತೇನೆ .

ಮಾಲುಪಟ್ಟಿಯಲ್ಲಿ ಇರುವ ಮಾಲು ಸಂಖ್ಯೆಃ 4 ಯನ್ನು ಈಗಾಗಲೇ ಎಂ.ಓ 1 ಎಂದು ಗುರುತಿಸಿದ್ದು , ಅದನ್ನು ನೋಡಿದರೆ ಗುರುತಿಸುತ್ತೇನೆ . ಠಾಣಾ ಗುನ್ನೆ ಸಂಃ 348/2021 ರಲ್ಲಿ ಸದರಿ ಮಾಲನ್ನು ಈಗಾಗಲೇ ಗುರುತಿಸಲಾಗಿದೆ . ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ದಿಃ 12-11-2021 ರಂದು ಆರೋಪಿಯ ವಿರುದ್ಧ ಆರೋಪ ಸಾಬೀತಾದುದರಿಂದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ಚಾಸಾ 1 ರವರು ದೂರು ನೀಡುವ ಕಾಲಕ್ಕೆ ನಿ ಪಿ 1 ರಲ್ಲಿ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ . ಚಾಸಾ 1 ರವರು ದೂರು ನೀಡುವ ಸಮಯದಲ್ಲಿ ಖಾಯಂ ಅಥವಾ ಹಂಗಾಮಿಯಾಗಿ ಬಿ.ಎಸ್.ಎನ್.ಎಲ್ ಕೆಲಸ ಮಾಡುತ್ತಿದ್ದರು ಎಂದು ನಾನು ದೋಷಾರೋಪಣಾ ಪಟ್ಟಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ . ದಿಃ 30-08-2021 ರಂದು ಚಾಸಾ 1 ರವರು ನನಗೆ ದೂರನ್ನು ಸಲ್ಲಿಸಿರುತ್ತಾರೆ ಎಂದರೆಸ ರಿ . ಸದರಿ ದೂರಿನಲ್ಲಿ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಈ ಹಿಂದೆ ಸತತವಾಗಿ ಕಳ್ಳತನವಾಗಿರುವ ಬಗ್ಗೆ ನಮೂದುಪಡಿಸಿರುತ್ತಾರೆ ಎಂದರೆ ಸರಿ . ಸದರಿ ನಮೂದಿನ ಬಗ್ಗೆ ನಾನು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಕಾಲಕ್ಕೆ ತನಿಖೆಯನ್ನು ಕೈ ಗೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ವಿಚಾರವನ್ನು ನಾನು ದೋಷಾರೋಪಣಾ ಪಟ್ಟಿಯಲ್ಲಿ ನಮೂದುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಎಷ್ಟು ಉದ್ದದ ಕಾಪರ್ ವೈರ್ ನ್ನು ಅಳವಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ದೂರಿನ ಪ್ರಕಾರ ನಾವು ತನಿಖೆಯನ್ನು ಕೈಗೊಂಡಿರುತ್ತೇವೆ ಎಂದು ನುಡಿಯುತ್ತಾರೆ . ಸಿಸಿ 36/22 ರಲ್ಲಿ ಈ ಪ್ರಕರಣದ ಆರೋಪಿಯ ಮೇಲೆ ಈಗಾಗಲೇ ಪ್ರಕರಣವನ್ನು ದಾಖಲಿಸಿದ್ದು ಈ ಪ್ರಕರಣಕ್ಕಾಗಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಚಾಸಾ 1 ರವರು ಹಂಗಾಮಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ

ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿ ಪಿ 3 ರಲ್ಲಿ ಬಿ.ಎಸ್.ಎನ್.ಎಲ್ ಕಛೇರಿಯ ನಾಮಫಲಕ ಇರುವುದಿಲ್ಲ ಎಂದರೆ ಸಾಕ್ಷಿಯು ಕಛೇರಿಯ ಒಳಗೆ ಪೋಟೋ ತೆಗೆದಿದ್ದರಿಂದ ಇರುವುದಿಲ್ಲ ಎಂದು ನುಡಿಯುತ್ತಾರೆ . ಚಾಸಾ 6 ರಿಂದ 9 ರವರ ಯಾವುದೇ ಹೇಳಿಕೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ರೂಃ 2000/- ಹಣವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ , ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿಅಂಶಕ್ಕೋಸ್ಕರ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂರದೆ ಸರಿಯಲ್ಲ . ಆರೋಪಿಯನ್ನು ಇದೇ ಮೊದಲಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿಗೆ ತೊಂದರೆ ಕೊಡುವ ಕಾರಣದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ-ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೇ ಸರಿ ಇದೆ.**

**01 ನೇ** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.